# ಪವಿತ್ರ ಪತ್ರಮಾಲೆ

# ಸ್ವಾಮಿ ಶಿವಾನಂದಜಿ ಅವರ ಒಂದು ಪತ್ರ



**ರಾಮಕೃಷ್ಣ ಮಠ**
**ಬೇಲೂರು, ಹೌರಾ**
**೧೨, ಡಿಸೆಂಬರ್, ೧೯೨೨**

ಪ್ರೀತಿಯ...

ನಿನ್ನ ಪತ್ರ ಬಂದು ತಲುಪಿತು. ಎಲ್ಲ ವಿಷಯವೂ ತಿಳಿಯಿತು. ಶ್ರೀರಾಮಕೃಷ್ಣರ ನಾಮವನ್ನು ಸಾಧ್ಯವಾದಷ್ಟು ಉಚ್ಚರಿಸುತ್ತ ಹೋಗು. ನಿನ್ನ ಮನಸ್ಸನ್ನು ಅದರಲ್ಲೇ ತನ್ಮಯವಾಗಿಸಿಡು. ಆಗ ನಿನ್ನ ಮನಸ್ಸು ಅದರಲ್ಲಿ ಎಷ್ಟು ಮುಳುಗಿರುತ್ತದೆಯೆಂದರೆ – ಲೌಕಿಕವಾಗಲಿ, ನೈತಿಕವಾಗಲಿ, ಆಧ್ಯಾತ್ಮಿಕವಾಗಲಿ – ಏನನ್ನೂ ನೀನು ಕಳೆದುಕೊಳ್ಳುವುದಿಲ್ಲ. ಭಗವಂತನಲ್ಲಿ ನಿನಗೆ ಭಕ್ತಿ ಇಲ್ಲದಿದ್ದರೆ ಅಥವಾ ವಿಶ್ವಾಸ ಇಲ್ಲದಿದ್ದರೆ ಮಾತ್ರವೇ ನೀನು ಆ ಸಂಗತಿಗಳನ್ನು ನಷ್ಟಮಾಡಿಕೊಳ್ಳುತ್ತೀಯೆ. ತೃಪ್ತಿ ಎನ್ನುವುದು ಬಹುದೊಡ್ಡ ಸಂಪತ್ತು. ತೃಪ್ತಿಯೆನ್ನುವುದು ಭಕ್ತಿಯಿಂದಲೇ ಮೂಡಿಬರುವಂಥದ್ದು. ತುಂಬು ಹೃದಯದಿಂದ ಪ್ರಾರ್ಥನೆ ಮಾಡು. ರಚ್ಚೆಹಿಡಿದ ಮಗುವಿನಂತೆ, ನಿನಗೇನು ಬೇಕೋ ಅದಕ್ಕಾಗಿ ಅಳು. ಹಾಗೆಯೇ ಭಗವಂತನ ಪವಿತ್ರನಾಮವನ್ನು ಸದಾಕಾಲವೂ ಉಚ್ಚರಿಸುತ್ತ ಹೋಗು. ಭಗವಂತನ ನಾಮವು ಮುಕ್ತಿಯನ್ನು ತಂದುಕೊಡುತ್ತದೆ. ಅದರ ಮೇಲೆ ಆ ಪರಮೇಶ್ವರನೇ ತನ್ನ ಶಕ್ತಿಯನ್ನು ಅನುಗ್ರಹಿಸಿದ್ದಾನೆ. ಅದು ಜನ್ಮಜನ್ಮಾಂತರದಲ್ಲಿ ಸೇರಿಕೊಂಡಿರುವ ನಿನ್ನೆಲ್ಲ ಪಾಪ ಮತ್ತು ಕೆಡುಕಿನ ಸಂಸ್ಕಾರಗಳನ್ನು ತೊಳೆಯುವುದು. ಇದಕ್ಕೋಸ್ಕರವಾಗಿಯೇ ಭಗವಂತನು ತನ್ನ ಪರಂಧಾಮವನ್ನು ಬಿಟ್ಟುಬಂದಿರುವನು; ಎಲ್ಲಿ ಯಾವ ಮಿಥ್ಯಾಭ್ರಮೆಗಳೂ ಇಲ್ಲವೋ, ಆ ಲೋಕವನ್ನು ಬಿಟ್ಟು ದಿವ್ಯ ಅವತಾರರೂಪದಲ್ಲಿ ಲೀಲೆಯನ್ನಾಡಲು ಮನುಷ್ಯರೂಪವನ್ನು ಧರಿಸಿರುವನು. ಆತನು ಈಗ 'ರಾಮಕೃಷ್ಣ' ಎಂಬ ಹೆಸರಿನ ನಾಮ ಮತ್ತು ರೂಪವನ್ನು ಧರಿಸಿರುವನು. ಆತನು ಈ ನಾಮ ಮತ್ತು ರೂಪವನ್ನು ತಾಳಿರುವುದು ಏಕೆ ಗೊತ್ತೇ? ಎಲ್ಲ ಬಗೆಯ ನಾಮರೂಪಗಳಾಚೆಗೆ ಮೀರಿಹೋಗಲು ಮತ್ತು ನಿತ್ಯ ಶಾಂತಿಧಾಮವನ್ನು ಹೊಂದಲು ನಮಗೆ ಸಹಾಯ ಮಾಡುವುದಕ್ಕೆ. ನಾವು ಭಗವಂತನಲ್ಲಿ ಯಾವಾಗ ವಿಶ್ವಾಸವನ್ನು ಕಳೆದುಕೊಳ್ಳುತ್ತೇವೆಯೋ, ಆಗ ಮಾನಸಿಕ ಖಿನ್ನತೆಗೆ ಬಲಿಯಾಗುತ್ತೇವೆ. ಶ್ರೀರಾಮಕೃಷ್ಣರಲ್ಲಿ ದೃಢವಾದ ಮತ್ತು ಅಭೇದ್ಯವಾದ ಶ್ರದ್ಧೆಯನ್ನು ನೀನು ಹೊಂದಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಅಂತಹ ಶ್ರದ್ಧೆಯನ್ನು ನೀನು ಹೊಂದಿದರೆ, ನಂತರ ಪ್ರೇಮ ಮತ್ತು ಭಕ್ತಿಗಳು ತಾವಾಗಿಯೇ ಅದನ್ನು ಅನುಕರಿಸುತ್ತವೆ. ಹೀಗೆ ಆಗಲೇಬೇಕು.

ಅಲ್ಲಿನ ಯುವಕರು ಉತ್ಸವಗಳನ್ನು ಆಚರಿಸುವ ಬಗ್ಗೆ ಕಾತರರಾಗಿದ್ದಾರೆಂದು ತಿಳಿದು ಬಹಳ ಸಂತೋಷವಾಯಿತು. ಮಹಾಪುರುಷರ ಜೀವನ ಮತ್ತು ಚಾರಿತ್ರ್ಯಗಳನ್ನು ಸ್ವಲ್ಪವಾದರೂ ಅರ್ಥಮಾಡಿಕೊಳ್ಳುವ ಶಕ್ತಿಯುಳ್ಳವರೇ ನಿಜವಾಗಿಯೂ ಧನ್ಯರು. ಆ ಮಹಾತ್ಮರಲ್ಲಿ ತಾವು ಗುರುತಿಸುವ ಸದ್ಗುಣಗಳನ್ನು ಅವರು ತಮ್ಮಲ್ಲಿ ನಿಸ್ಸಂದೇಹವಾಗಿ ಒಡಮೂಡಿಸಿಕೊಳ್ಳುತ್ತಾರೆ.

ಶ್ರೀರಾಮಕೃಷ್ಣರು ಆಗಾಗ್ಗೆ ಹೀಗೆ ಉಪದೇಶಿಸುತ್ತಿದ್ದರು: **"ಭಗವಂತನನ್ನೇ ಅವಲಂಬಿಸಿರು. ಅವನನ್ನೇ ಚಿಂತಿಸು. ಅವನ ಬಗ್ಗೆಯೇ ಮಾತುಕತೆಯಾಡು. ಆತನ ಬಗ್ಗೆಯೇ ಅಧ್ಯಯನವನ್ನು ಮಾಡು. ಆತನು ಸೃಷ್ಟಿಸಿದ ಎಲ್ಲ ಜೀವಿಗಳನ್ನೂ ಪ್ರೀತಿಸು. ಇದನ್ನು ಯಾವಾಗಲೂ ಮಾಡುತ್ತಿರು. ನೀನು ನಿನ್ನ ಗುರಿಯನ್ನು ಕ್ರಮೇಣ ಕಂಡುಕೊಳ್ಳುವೆ, ಭಗವಂತನೊಡನೆಯೇ ಒಂದಾಗಿಬಿಡುವೆ."**

ನನ್ನ ಆರೋಗ್ಯ ಅಷ್ಟೇನೂ ಕೆಟ್ಟಿಲ್ಲ. ನೀನು ಚೆನ್ನಾಗಿದ್ದೀಯೆ ಎಂದು ತಿಳಿದು ಸಂತೋಷವಾಯಿತು. ನಿನಗೆ ಮತ್ತು ಕಿರಿಯರಿಗೆ ನನ್ನ ಹಾರ್ದಿಕ ಪ್ರೀತಿ ಮತ್ತು ಶುಭಕಾಮನೆಗಳನ್ನು ಈ ಮೂಲಕ ತಿಳಿಸುತ್ತಿದ್ದೇನೆ. ಮಠದಲ್ಲಿ ಎಲ್ಲರೂ ಭಗವಂತನ ಕೃಪೆಯಿಂದ ಚೆನ್ನಾಗಿಯೇ ಇದ್ದಾರೆ. ಈ ವರ್ಷ ಶ್ರೀಮಾತೆಯವರ ಜಯಂತಿಯಂದು ಅನೇಕ ಜನರು ಬಂದು, ಪ್ರಸಾದ ಸ್ವೀಕರಿಸಿದರು. ಈ ಉತ್ಸವಕ್ಕೆ ಇಷ್ಟೊಂದು ಜನ ಎಂದೂ ಮಠದಲ್ಲಿ ಈ ಹಿಂದೆ ಸೇರಿರಲಿಲ್ಲ.

ಶುಭಕಾಮನೆಗಳೊಂದಿಗೆ,

ನಿನ್ನವ
**ಶಿವಾನಂದ**

# ಯಜುರ್ವೇದಾವಲೋಕನ

ವಿಘ್ನೇಶ್ವರ ಭಟ್

*(ವೇದವಾಙ್ಮಯದಲ್ಲಿ ಋಗ್ವೇದವನ್ನು ಬಿಟ್ಟರೆ ಎರಡನೆಯ ಸ್ಥಾನ ಯಜುರ್ವೇದಕ್ಕೆ ಸಲ್ಲುತ್ತದೆ. ವೈದಿಕ ಯಜ್ಞಗಳ ವಿಧಿವಿಧಾನವೇ ಪ್ರಧಾನವಾಗಿರುವ ಈ ವೇದದ ಸ್ಥೂಲ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ಮೈಸೂರಿನ ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ, ಮೀಮಾಂಸಾ ವಿದ್ವತ್ ತರಗತಿಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ.)*

**ವೇದದ ಕಾರ್ಯ :** ಭಾರತವು ವಿಶ್ವದಲ್ಲಿಯೇ ಅತಿಮುಖ್ಯವಾದ ಸ್ಥಾನವನ್ನು ಅಲಂಕರಿಸಿದೆ. ಈ ಗರಿಮೆಗೆ ಮುಖ್ಯ ಕಾರಣವೇನೆಂದು ಅನ್ವೇಷಿಸಿದಲ್ಲಿ ಭಾರತದ ಅಂತಃಸತ್ವ ರೂಪವಾದ ವೇದವು ಗೋಚರವಾಗುತ್ತದೆ.

**ಹಿಮಾಲಯಂ ಸಮುದ್ದಿಶ್ಯ ಯಾವದಿಂದೂಸರೋವರಂ ।**
**ತದ್ದೇವನಿರ್ಮಿತಂ ರಾಷ್ಟ್ರಂ ಹಿಂದೂಸ್ಥಾನಂ ಪ್ರಚಕ್ಷತೇ ॥**

ಎಂಬುದಾಗಿ ಬೃಹಸ್ಪತಿಯ ತಂತ್ರದಲ್ಲಿ ಹೇಳಿದೆ. ಹಿಮಾಲಯದಿಂದ ಆರಂಭಿಸಿ ಕನ್ಯಾಕುಮಾರಿಯವರೆಗೆ ಆವರಿಸಿರುವ ಭೂಭಾಗವನ್ನು 'ಹಿಂದೂಸ್ಥಾನ'ವೆಂದು ಕರೆಯುತ್ತಾರೆ ಎಂಬ ವಿಷಯ ಎಲ್ಲರಿಗೂ ತಿಳಿದದ್ದೇ ಆಗಿದೆ. **'ಹೀನಂ ಚ ದೂಷಯತ್ಯೇವ ಹಿಂದುರಿತ್ಯುಚ್ಯತೇ ಪ್ರಿಯೇ'** ಎಂಬುದಾಗಿ ಮೇರುತಂತ್ರದಲ್ಲಿ ಹೇಳಲ್ಪಟ್ಟಿದೆ. ಕೆಟ್ಟಕಾರ್ಯಗಳನ್ನು, ಕೆಟ್ಟ ಸಂಸ್ಕೃತಿಗಳನ್ನು ದೂಷಿಸುವ ಸಮುದಾಯವು 'ಹಿಂದೂ' ಪದದಿಂದ ಕರೆಯಲ್ಪಡುತ್ತದೆ. ದುಷ್ಟಸಂಸ್ಕಾರಗಳನ್ನು ಖಂಡಿಸುವ ಶಕ್ತಿಯು ಶಿಷ್ಟಸಂಸ್ಕಾರಗಳಿಂದ ಸುಸಂಸ್ಕೃತನಾದವನಿಗೆ ಮಾತ್ರ ಸಿದ್ಧಿಸುತ್ತದೆ. ಅಂತಹ ಶಿಷ್ಟಸಂಸ್ಕಾರಗಳನ್ನು ಬೋಧಿಸುವುದು ವೇದವೇ ಆಗಿದೆ.

**ವೇದವೆಂದರೇನು?:** ವೇದವೆಂದರೇನು? ವೇದದಲ್ಲಿ ಎಷ್ಟು ವಿಧ? ವೇದದ ಉಗಮ ಹೇಗೆ? ವೇದದ ಪ್ರಯೋಜನವೇನು? ಎಂಬ ಈ ಪ್ರಶ್ನೆಗಳು ಮನಸ್ಸಿನಾಳದಲ್ಲಿ ಮೊಳಗುತ್ತವೆ. ಕೃಷ್ಣಯಜುರ್ವೇದದ ತೈತ್ತಿರೀಯ ಸಂಹಿತೆಗೆ ಸಾಯಣರು ಬರೆದ ಭಾಷ್ಯಭೂಮಿಕೆಯಲ್ಲಿ 'ವೇದ' ಪದವನ್ನು ಹೀಗೆ ವಿವರಿಸಲಾಗಿದೆ: **'ಇಷ್ಟಪ್ರಾಪ್ತಿ ಅನಿಷ್ಟ ಪರಿಹಾರಯೋಃ ಅಲೌಕಿಕ ಉಪಾಯಂ ಯೋ ಗ್ರಂಥೋ ವೇದಯತಿ ಸ ವೇದಃ'.** ಇದರರ್ಥ ಹೀಗಿದೆ: "ಯಾವ ಗ್ರಂಥವು ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿಗಳಿಗೆ ಅಲೌಕಿಕ ಉಪಾಯವನ್ನು ಬೋಧಿಸುವುದೋ ಅದೇ ವೇದ." ಈ ವೇದವು ಪ್ರಮುಖವಾಗಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂಬುದಾಗಿ ವಿಭಾಗಿಸಲ್ಪಟ್ಟಿದೆ. ವೇದದ ಮೂಲತತ್ತ್ವವೇ ಧರ್ಮಪ್ರತಿಪಾದನೆಯಾಗಿದೆ. 'ಧರ್ಮಕ್ಕೆ ಮೂಲ ವೇದ' ಎಂಬುದಾಗಿ ಮನು ಮುಂತಾದ ಸ್ಮೃತಿಕಾರರು ಉದ್ಘೋಷಿಸಿದ್ದಾರೆ. ಈ ವೇದಗಳಲ್ಲಿ ಯಜುರ್ವೇದವು ಯಜ್ಞಪ್ರಕ್ರಿಯೆಗಳಲ್ಲಿ ಅತಿ ಮುಖ್ಯಸ್ಥಾನವನ್ನು ಅಲಂಕರಿಸುತ್ತದೆ. ಗದ್ಯರೂಪವಾದಂತಹ ವಚನಕ್ಕೆ, **'ಯಜುಸ್'** ಎಂಬುದಾಗಿ ಪ್ರಯೋಗವು ವೇದವಾಙ್ಮಯದಲ್ಲಿ ಪ್ರಸಿದ್ಧವಾಗಿದೆ. **'ಅನಿಯತಾಕ್ಷರ ಅವಸಾನೋ ಯಜುಃ', 'ಗದ್ಯಾತ್ಮಕೋ ಯಜುಃ'** ಎಂಬುದಾಗಿ 'ಯಜುಸ್' ಪದದ ನಿರ್ವಚನವು ಅಲ್ಲಲ್ಲಿ ಕೇಳಿಬರುತ್ತದೆ.



**ಕರ್ಮಗಳು:** ಸಾಮಾನ್ಯವಾಗಿ ಕರ್ಮವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು: **ಶ್ರೌತ, ಸ್ಮಾರ್ತ, ತಾಂತ್ರಿಕ, ಪೌರಾಣಿಕ.** ಅವುಗಳಲ್ಲಿ ಮೊದಲನೆಯದು ಶ್ರೌತಕರ್ಮ, ಅಂದರೆ ಶ್ರುತಿಯಲ್ಲಿ ಹೇಳಲ್ಪಟ್ಟ ಸೋಮಯಾಗ, ರಾಜಸೂಯಾದಿ ಮಹಾಯಜ್ಞಗಳು. ಇಂತಹ ಶ್ರೌತಯಜ್ಞಗಳನ್ನು ಆಚರಿಸಲು ಅನೇಕ ಪುರೋಹಿತರ ಆವಶ್ಯಕತೆ ಇರುತ್ತದೆ. ಯಜ್ಞದಲ್ಲಿ ಪ್ರಧಾನವಾಗಿ **ಹೋತೃಗಣ, ಅಧ್ವರ್ಯುಗಣ, ಉದ್ಗಾತೃಗಣ, ಬ್ರಹ್ಮಗಣ** ಎಂಬುದಾಗಿ ನಾಲ್ಕು ಗಣಗಳಿರುತ್ತವೆ. ಇವರಲ್ಲಿ ಯಾವ ವ್ಯಕ್ತಿಯು ಯಜುಶ್ಶಾಖೆಯವನಾಗಿರುತ್ತಾನೋ, ಯಜುರ್ವೇದಾಧ್ಯಾಯಿಯಾಗಿರುತ್ತಾನೋ ಆತನು **'ಅಧ್ವರ್ಯು'** ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತಾನೆ. ಈತನು ಯಜ್ಞದಲ್ಲಿ ಅತಿ ಮುಖ್ಯವಾದ ಸ್ಥಾನವನ್ನು ಹೊಂದಿರುತ್ತಾನೆ.

**ಯಜುರ್ವೇದ:** ಕರ್ಮಾಚರಣೆಗೆ ಅಗ್ರಪ್ರಾಶಸ್ತ್ಯವನ್ನಿತ್ತ ಭಾರತೀಯರು ಯಜುರ್ವೇದವನ್ನು ಹೆಚ್ಚಾಗಿ ಅಧ್ಯಯನ ಮಾಡುವ ಪರಂಪರೆಯನ್ನು ಉಳಿಸಿಕೊಂಡು ಬಂದಿರುವುದು ಸಹಜವೇ ಆಗಿದೆ. ಆದ್ದರಿಂದಲೇ ಇದರಲ್ಲಿ ಹಲವು ಶಾಖೆಗಳು ಕಂಡುಬರುತ್ತವೆ. **'ಏಕಶತಂ ಅಧ್ವರ್ಯುಶಾಖಾ'** – 'ಅಧ್ವರ್ಯುಶಾಖೆಗಳು ಒಂದುನೂರು' ಎಂದು ಮಹಾಭಾಷ್ಯದಲ್ಲಿ ಪತಂಜಲಿಯು ನುಡಿದಿದ್ದಾನೆ. ಆದರೆ ಈಗ ಅದರ ಅನೇಕ ಶಾಖೆಗಳು ಉಪಲಬ್ಧವಿಲ್ಲ. ಸದ್ಯಕ್ಕೆ ಆರು ಶಾಖೆಗಳು ಮಾತ್ರ ಲಭ್ಯ. ಅವು ಹೀಗಿವೆ:

**೧) ಕಾಟಕ ಸಂಹಿತೆ**
**೨) ಕಪಿಷ್ಠಲಕ ಸಂಹಿತೆ**
**೩) ಮೈತ್ರಾಯಣೀಯ ಸಂಹಿತೆ**
**೪) ತೈತ್ತಿರೀಯ ಸಂಹಿತೆ**
**೫) ವಾಜಸನೇಯಿ ಸಂಹಿತೆಯ ಕಾಣ್ವಶಾಖೆ**
**೬) ವಾಜಸನೇಯಿ ಸಂಹಿತೆಯ ಮಾಧ್ಯಂದಿನ ಶಾಖೆ**

ಇವುಗಳಲ್ಲಿ ಮೊದಲನೆಯ ನಾಲ್ಕು ಶಾಖೆಗಳನ್ನು ಕೃಷ್ಣಯಜುರ್ವೇದವೆಂದೂ, ಕೊನೆಯ ಎರಡು ಶಾಖೆಗಳನ್ನು ಶುಕ್ಲಯಜುರ್ವೇದವೆಂದೂ ಕರೆಯುತ್ತಾರೆ. ಕೃಷ್ಣಯಜುರ್ವೇದದಲ್ಲಿ ಯಜ್ಞದಲ್ಲಿ ಉಪಯೋಗಿಸುವ ಪರಿಕರಗಳನ್ನು ವಿವರಿಸುವ ವಾಕ್ಯಗಳು ಹಾಗೂ ಮಂತ್ರಗಳು ಕಂಡುಬರುತ್ತವೆ. ಶುಕ್ಲಯಜುರ್ವೇದವಾದರೋ ಕೇವಲ ಮಂತ್ರಾತ್ಮಕವಾಗಿದೆ.

**ಪೌರಾಣಿಕ ಕಥೆ:** ಯಜುರ್ವೇದದ ವಿಷಯದಲ್ಲಿ ಪೌರಾಣಿಕ ಕಥೆಯೊಂದು ಪ್ರಚಲಿತವಾಗಿದೆ. ಹಿಂದೆ ತಮ್ಮ ತಪೋಬಲದಿಂದ ವೇದವನ್ನು ಸಾಕ್ಷಾತ್ಕರಿಸಿಕೊಂಡ ವ್ಯಾಸರು ವೈಶಂಪಾಯನರಿಗೆ ಅದನ್ನು ಬೋಧಿಸುತ್ತಾರೆ. ವೈಶಂಪಾಯನರು ತಮ್ಮ ಶಿಷ್ಯನಾದ ಯಾಜ್ಞವಲ್ಕ್ಯನಿಗೆ ಯಜುರ್ವೇದವನ್ನು ಉಪದೇಶಿಸಿದರು. ಯಾವುದೋ ಒಂದು ಕಾರಣದಿಂದ ಕುಪಿತರಾದ ವೈಶಂಪಾಯನರು ತಮ್ಮಿಂದ ಕಲಿತ ವೇದವನ್ನು ಪುನಃ ತಮಗೊಪ್ಪಿಸಬೇಕೆಂಬುದಾಗಿ ಯಾಜ್ಞವಲ್ಕ್ಯರನ್ನು ಆಗ್ರಹಿಸುತ್ತಾರೆ. ಗುರುವಾಕ್ಯಪರಿಪಾಲನೆಗಾಗಿ, ಅಭ್ಯಾಸ ಮಾಡಿದ್ದ ಸಮಸ್ತ ವೇದವನ್ನೂ ಯಾಜ್ಞವಲ್ಕ್ಯರು ಗುರುಸನ್ನಿಧಿಯಲ್ಲಿ ವಮನ (ವಾಂತಿ) ಮಾಡುತ್ತಾರೆ. ವೈಶಂಪಾಯನರ ಉಳಿದ ಶಿಷ್ಯರು ತಿತ್ತಿರಿ (ಒಂದು ಜಾತಿಯ ಪಕ್ಷಿವಿಶೇಷ) ಎಂಬ ಪಕ್ಷಿಯ ರೂಪವನ್ನು ತಾಳಿ ಯಾಜ್ಞವಲ್ಕ್ಯರಿಂದ ವಮಿಸಲ್ಪಟ್ಟ ವೇದವನ್ನು ಭಕ್ಷಿಸುತ್ತಾರೆ. ಭಕ್ಷಿಸಲ್ಪಟ್ಟ ಈ ವೇದವು ಮುಂದೆ 'ತೈತ್ತಿರೀಯ ಶಾಖೆ' ಎಂದು ಪ್ರಸಿದ್ಧಿಯನ್ನು ಹೊಂದುತ್ತದೆ. ಮತ್ತೆ ವೇದವನ್ನು ಅಭ್ಯಸಿಸಲು ಉತ್ಸುಕರಾದ ಯಾಜ್ಞವಲ್ಕ್ಯರು ಸೂರ್ಯನನ್ನು ಕುರಿತು ತಪಸ್ಸನ್ನಾಚರಿಸಿ ಪುನಃ ವೇದವನ್ನು ಪಡೆಯುತ್ತಾರೆ. ವೇದೋಪದೇಶದ ಸಮಯದಲ್ಲಿ ಸೂರ್ಯನು ಸ್ವತಃ 'ವಾಜೀ' ಎಂಬ ದೇವತಾರೂಪದಲ್ಲಿ ಪ್ರತ್ಯಕ್ಷನಾಗಿ ಯಾಜ್ಞವಲ್ಕ್ಯರಿಗೆ ವೇದವನ್ನು ಉಪದೇಶಿಸುತ್ತಾನೆ. ಆದಕಾರಣ ಶುಕ್ಲಯಜುರ್ವೇದವು 'ವಾಜಸನೇಯಿ ಶಾಖೆ' ಎಂದು ಪ್ರಸಿದ್ಧಿಯನ್ನು ಹೊಂದಿದೆ.

**ಕೃಷ್ಣಯಜುರ್ವೇದ:** ಕೃಷ್ಣಯಜುರ್ವೇದದ ತೈತ್ತಿರೀಯ ಶಾಖೆಯಲ್ಲಿ **ಸಾರಸ್ವತ** ಮತ್ತು **ಆರ್ಷೇಯ** ಎಂಬುದಾಗಿ ಎರಡು ರೀತಿಯಾದ ಅಧ್ಯಯನ ಕ್ರಮಗಳಿವೆ. ಸಾರಸ್ವತಕ್ರಮವು ಕೇವಲ ಅಧ್ಯಯನೋದ್ದೇಶದಿಂದ ವಿಭಾಗಿಸಲ್ಪಟ್ಟಿದ್ದಾಗಿದೆ. ಸಾರಸ್ವತ ಕ್ರಮದಲ್ಲಿ **ಸಂಹಿತೆ, ಬ್ರಾಹ್ಮಣ, ಆರಣ್ಯಕ** ಎಂಬುದಾಗಿ ಮೂರು ವಿಭಾಗಗಳನ್ನು ಮಾಡಲಾಗಿದೆ. ಸಂಹಿತಾಭಾಗದಲ್ಲಿ ಏಳು ಕಾಂಡಗಳಿದ್ದು, ಪ್ರತಿಕಾಂಡವೂ ಅನೇಕ 'ಪ್ರಶ್ನ'ಗಳೆಂಬ ಪ್ರವಿಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಬ್ರಾಹ್ಮಣ ಭಾಗದಲ್ಲಿ ಪ್ರಮುಖವಾಗಿ 'ಅಷ್ಟಕ'ಗಳೆಂಬ ಮೂರು ಅಧ್ಯಾಯಗಳಿವೆ. ಪ್ರತಿಯೊಂದು ಅಷ್ಟಕದಲ್ಲಿಯೂ ಎಂಟೆಂಟು ಉಪ ಅಧ್ಯಾಯಗಳಿವೆ ಅದೇ ರೀತಿಯಾಗಿ ಆರಣ್ಯಕದಲ್ಲಿ ಏಳು ಅಧ್ಯಾಯಗಳಿವೆ. ಸಂಹಿತಾಭಾಗದಲ್ಲಿ ಮಂತ್ರಗಳು ಹಾಗೂ ಬ್ರಾಹ್ಮಣಗಳು ಸಮ್ಮಿಶ್ರವಾಗಿವೆ. ಅದೇರೀತಿ ಬ್ರಾಹ್ಮಣದಲ್ಲಿ ಕೂಡ ಮಂತ್ರಗಳು ಹಾಗೂ ಬ್ರಾಹ್ಮಣಗಳು ಸಮ್ಮಿಶ್ರವಾಗಿವೆ. ಈ ಎರಡು ಭಾಗಗಳು ದರ್ಶಪೂರ್ಣಮಾಸವೇ ಮೊದಲಾದ ಶ್ರೌತ ಯಾಗಗಳಿಗೆ ಸಂಬಂಧಿಸಿದ ವಿಷಯಗಳನ್ನು ತಿಳಿಸಿಕೊಡುತ್ತವೆ.

ಕರ್ಮಾನುಷ್ಠಾನ ಸಮಯದಲ್ಲಿ ಉಚ್ಚರಿಸುವ ವೇದ ವಾಕ್ಯಗಳನ್ನು ಮಂತ್ರಗಳೆಂದು ಕರೆಯುತ್ತಾರೆ. ಕರ್ಮವನ್ನು ಹೇಗೆ ಆಚರಿಸಬೇಕು, ಕರ್ಮದಲ್ಲಿ ಯಾವುದು ಮುಖ್ಯ? ಕರ್ಮವನ್ನು ಯಾರು ಆಚರಿಸಬೇಕು? ಕರ್ಮಕ್ಕೆ ಏನು ಫಲ? ಕರ್ಮವನ್ನು ಯಾವ ಕಾಲದಲ್ಲಿ ಆಚರಿಸಬೇಕು? ಎನ್ನುವ ವಿಷಯಗಳನ್ನು ವಿವರಿಸುವ ವಾಕ್ಯಗಳು 'ಬ್ರಾಹ್ಮಣ' ಎಂಬ ಪದದಿಂದ ಕರೆಯಲ್ಪಡುತ್ತವೆ. ಆರಣ್ಯಕ ಭಾಗವು ಬಹುತೇಕ ಅಧ್ಯಾತ್ಮವಿದ್ಯೆಯನ್ನು ವಿವರಿಸುತ್ತದೆ.

ಇದೇ ರೀತಿಯಾಗಿ ಆರ್ಷಪಾಠಕ್ರಮದಲ್ಲಿ ಪ್ರಾಜಾಪತ್ಯ, ಸೌಮ್ಯ, ಆಗ್ನೇಯ, ವೈಶ್ವದೇವ, ಸ್ವಾಯಂಭುವ ಎಂಬುದಾಗಿ ಐದು ಅಧ್ಯಾಯಗಳು ಪ್ರಸಿದ್ಧವಾಗಿವೆ. ಕರ್ಮಾನುಷ್ಠಾನವು ಆರ್ಷೇಯ ಪಾಠಕ್ರಮದಲ್ಲಿಯೇ ನಡೆಯುತ್ತದೆ.

ತೈತ್ತಿರೀಯ ಸಂಹಿತೆಯಂತೆ ಮೈತ್ರಾಯಣೀಯ ಹಾಗೂ ಕಠಸಂಹಿತೆಗಳೂ ಗದ್ಯಪದ್ಯಾತ್ಮಕವಾಗಿವೆ. ಮೈತ್ರಾಯಣೀಯದಲ್ಲಿ ನಾಲ್ಕು ಹಾಗೂ ಕಠದಲ್ಲಿ ಐದು ಕಾಂಡಗಳಿವೆ. ಕಪಿಷ್ಠಲ ಸಂಹಿತೆಯ ಕೆಲವು ಭಾಗಗಳು ಮಾತ್ರ ಈಗ ಉಪಲಬ್ಧವಿವೆ.

**ಶುಕ್ಲಯಜುರ್ವೇದ:** ಅದೇ ರೀತಿ ಶುಕ್ಲಯಜುರ್ವೇದದಲ್ಲಿ ನಲವತ್ತು ಅಧ್ಯಾಯಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ಮೊದಲನೇ ಅಧ್ಯಾಯವು ದರ್ಶಪೂರ್ಣಮಾಸ ಯಾಗಕ್ಕೆ ಉಪಯೋಗಿಸುವ ಅಂಶಗಳನ್ನು ತಿಳಿಸಿಕೊಡುತ್ತದೆ. ದ್ವಿತೀಯ ಅಧ್ಯಾಯವು ಪಿಂಡಪಿತೃಯಜ್ಞವನ್ನು ವಿಶದಪಡಿಸುತ್ತದೆ. ತೃತೀಯಾಧ್ಯಾಯದಲ್ಲಿ ಅಗ್ನಿಹೋತ್ರ ಸಂಬಂಧಿ ವಿಷಯಗಳು ಉಲ್ಲೇಖವಾಗಿವೆ. ನಾಲ್ಕನೇ ಅಧ್ಯಾಯದಿಂದ ಎಂಟನೇ ಅಧ್ಯಾಯಪರ್ಯಂತ ಅಗ್ನಿಷ್ಟೋಮ ಯಾಗವು ವಿವರಿಸಲ್ಪಟ್ಟಿದೆ. ವಾಜಪೇಯ, ರಾಜಸೂಯ ಯಾಗಗಳು ಒಂಬತ್ತನೇ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿವೆ. ಹತ್ತರಲ್ಲಿ ಸೌತ್ರಾಮಣಿ ಯಾಗವು ಉಲ್ಲಿಖಿತವಾಗಿದೆ. ಹನ್ನೊಂದನೇ ಅಧ್ಯಾಯದಿಂದ ಹದಿನೆಂಟನೇ